# ಬಸವ ನಿರ್ಗಮನ

■ ಮಹಾಂತೇಶ ನವಲಕಲ್
ಕಲೆ: ಸಂತೋಷ್ ಸಸಿಹಿತ್ಲು



ಕಲ್ಯಾಣದಲ್ಲಿ ರಾಜಪ್ರಭುತ್ವ ನಮ್ಮನ್ನು ಉಚ್ಚಾಟನೆಗೊಳಿಸಿತ್ತು. ಬಿಜ್ಜಳ ಮಹಾರಾಜರು ಆರು ತಿಂಗಳ ಕಾಲ ನಾನು ಇಲ್ಲಿ ಇರಬಾರದು ಎಂದು ಆಜ್ಞಾಪಿಸಿದ್ದರು. ಆದರೆ ಅವರ ಮಗ ಸೋವಿದೇವ ನನಗೆ ಜೀವಿತಾವಧಿಯಲಿ ಕಲ್ಯಾಣಕ್ಕೆ ಬರಬಾರದು ಎನ್ನುವ ಸುಗ್ರೀವಾಜ್ಞೆ ಹೊರಡಿಸಿದ್ದ, ನಾನು ಅಪ್ಪಣ್ಣಗಳು, ಮಸಣಯ್ಯ, ಗುರುಬಸವ ಮಹಾಂತರಂತಹ ಅನೇಕ ತೊಂಬತ್ತೈದು ಶರಣರು ಆರಂಭದಲ್ಲಿ ನಮ್ಮ ಕಲ್ಯಾಣ ನಿರ್ಗಮನದ ಪ್ರಯಾಣದಲ್ಲಿ ಭಾಗವಹಿಸಿದ್ದರೂ ಅವರನ್ನು ಶರಣ ಧರ್ಮಗಳ ಉಪದೇಶಕ್ಕಾಗಿ ಆವ ಆವ ಊರುಗಳಲಿ ಬಿಟ್ಟು ನಾನು ಮತ್ತು ಅಪ್ಪಣ್ಣಗಳು ನಡೆಯುತ್ತ ನಡೆಯುತ್ತ ಬಾಗೇವಾಡಿಗೆ ಬಂದು ನಿಂತಿದ್ದೆವು.

ಇಲ್ಲಿಂದ ಸಂಗಮ ಇನ್ನೂ ಐವತ್ತು ಹರಿದಾರಿಗಳ ದೂರವಿತ್ತು. ಆಗ ಮಟ ಮಟ ಮಧ್ಯಾಹ್ನವಾಗಿತ್ತು. ನಾವು ಈಗ ಬಾಗೇವಾಡಿಯ ನಂದೀಶ್ವರನ ಗುಡಿಯಿಂದ ಒಂದು ಅರ್ಧಾರಿಗೆ ದೂರದಲ್ಲಿದ್ದೆವು. ಇಂದು ದಟ್ಟವಾದ ಮರದ ತೋಪಿನ ಕೆಳಗೆ ಬಂದು ನಿಂತಿದ್ದೆವು. ನಂದೀಶ್ವರ ಗುಡಿಯ ಶಿಖರ ಕಾಣುತ್ತಿತ್ತು. ನನಗೆ ಕಣ್ಣುಗಳು ಒತ್ತರಿಸಿ ಬಂದವು. ಸುಮಾರು ಐವತ್ತು ವರ್ಷಗಳ ಹಿಂದೆಯೇ ನಾನು ಈ ಊರನ್ನು ತ್ಯಜಿಸಿದ್ದೆ. ಈ ಊರಲ್ಲಿ ಇದ್ದದ್ದು ಹತ್ತು ವರ್ಷಗಳು ಮಾತ್ರ. ಆ ಹತ್ತು ವರ್ಷಗಳಲ್ಲಿ ಅನೇಕ ನೆನಪಿನ ಬುತ್ತಿಗಳು ನನಗೆ ಈ ಊರು ಕೊಟ್ಟಿತ್ತು. ನಾನು ಈ ಊರು ತ್ಯಜಿಸಿದ್ದು ಈ ಊರಿನ ದೆಸೆಯಿಂದಲ್ಲ. ಅಗ್ರಹಾರದ ದೆಸೆಯಿಂದ, ಈ ಅಗ್ರಹಾರದ ಜನ. ನನ್ನ ತಂದೆ ಮಂಡಿಗೆ ಮಹಾರಾಜ ಮಾದರಸನನ್ನು ಆರಾಮವಿರಲು ಬಿಡಲೇ ಇಲ್ಲ. ನಾನಿನ್ನು ಚಿಕ್ಕ ಮಗ. ನನ್ನಣ್ಣ ದೇವರಾಜ ಲಿಂಗೈಕ್ಯನಾದ. ಆತನನ್ನು ಹೂಳಬೇಕೋ ಅಥವಾ ಸುಡಬೇಕೊ? ಇಂಥ ಪ್ರಶ್ನೆಗಳನ್ನಿಟ್ಟುಕೊಂಡು ನಮ್ಮ ವೈಯಕ್ತಿಕ ದುಃಖ ಅಭಿವ್ಯಕ್ತಿಯ ಮೇಲೆ ಪ್ರಹಾರ ಮಾಡಿದ್ದರು ಈ ವೈದಿಕರು. ಅಣ್ಣನನ್ನು ಶಿವಾಗಮದ ಪ್ರಕಾರ ಅಪ್ಪ ಹೂಳಿ, ಈ ವೈದಿಕರಿಂದ ಬಹಿಷ್ಕಾರಕ್ಕೆ ಒಳಗಾಗಿದ್ದ. ಬಾಗುಡಿಯ ಅಗ್ರಹಾರವೆಂದರೆ ಬಹಿಷ್ಕಾರದ ಪ್ರತಿರೂಪವೇ ಆಗಿತ್ತು.

ದಾರಿಯಲ್ಲಿ ಬರುವಾಗಲೇ ಅಣ್ಣ ದೇವರಾಜನ ಸಮಾಧಿ ಮಾಡಿದ ಸ್ಥಳದಲ್ಲಿ ಅದಮ್ಯ ಕಾಡು ಬೆಳೆದು ನಿಂತಿತ್ತು. ಕ್ಷಣಹೊತ್ತು ನಾನು ಮತ್ತು ಅಪ್ಪಣ್ಣಗಳು ಅಲ್ಲಿ ಕುಳಿತೆವು. ಅಲ್ಲಿ ಅಣ್ಣ ದೇವರಾಜ ಮಣ್ಣಿನಲ್ಲಿ ಮಣ್ಣಾಗಿ ಯಾವುದೋ ಗಿಡಗಳಿಗೆ, ಆಹಾರವಾಗಿ ಮತ್ತೆ ಬೆಳೆದು ನಿಂತಿದ್ದ. ನಾನು ಪೂರ್ವಾಶ್ರಮದ ಬಂಧಗಳನು ಧಿಕ್ಕರಿಸಿದರೂ ಯಾಕೋ ದೇವರಾಜ ನನ್ನನ್ನು ಬಹುವಾಗಿ ಕಾಡಿದ. ನನ್ನನ್ನು ಎತ್ತಿಕೊಳ್ಳಲು ಹೋಗಿ ಮತ್ತೆ ನೆಲಕ್ಕೆ ಕೆಡವುತ್ತಿದ್ದ ದೇವರಾಜ. ಎಲ್ಲರಿಂದಲೂ ಬೈಸಿಕೊಳ್ಳುತ್ತಿದ್ದ. ಅಕ್ಕ ಅಮ್ಮ ಎಲ್ಲರೂ ಬಯ್ಯುತ್ತಿದ್ದರು. ನಂದೀಶ್ವರ ಗೋಪುರ ಹಾಗೆಯೇ ಹೊಳೆಯುತ್ತಿತ್ತು. ಇದನ್ನು ಕಟ್ಟಲಿಕ್ಕೆ ಬಲದೇವ ಸಿದ್ಧರಸರೆಂಬ ನನ್ನ ಸೋದರ ಮಾವಂದಿರು ಅಂದರೆ ನನ್ನ ತಾಯಿಯಣ್ಣಂದಿರು ಚಾಲುಕ್ಯ ರಾಜರನ್ನು ಒಪ್ಪಿಸಿದ್ದರು. ಅದರ ಪ್ರಕಾರ ಬೊಕ್ಕಸದಿಂದ ಹಣಬಂದು ನಂದೀಶ್ವರನ ಗುಡಿಯಾಗಿ ಜನ್ಮತಾಳಿತ್ತು. ಅಪ್ಪಣ್ಣ ನಾವು ಪುರ

ಅಶ್ವಥ ಮರ ಇನ್ನೂ ತನ್ನ ಬಾಹುಗಳನ್ನು ಚಾಚಿಕೊಂಡಿತ್ತು. ನಾನು ಸಣ್ಣವನಿದ್ದಾಗ ಈ ಮರ ಹತ್ತಿ ಮರಕೋತಿ ಆಟವಾಡುತ್ತಿದ್ದದು ನೆನಪಿಗೆ ಬಂತು. ಮನೆ ಹಾಳು ಬಿದ್ದಿತ್ತು. ಮನೆಯ ಪಕ್ಕದಲ್ಲಿದ್ದ ಅಪ್ಪನಿಗಿಂತಲೂ 78 ವರ್ಷ ದೊಡ್ಡವರಾಗಿದ್ದ ಕ್ರಮಿತನೆಂಬುವರು ಇದ್ದರು. ಅವರಿಗಾಗಲೇ ವಯಸ್ಸಾಗಿತ್ತು. ನಾವು ಚಿಕ್ಕವರಾಗಿದ್ದಾಗ ಆತ ನಮ್ಮನ್ನೆಲ್ಲ ಬಾಯಿಗೆ ಬಂದ ಹಾಗೆ ಬಯ್ದು ಕಳಿಸುತ್ತಿದ್ದರು.